ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-560001
ದಿನಾಂಕ;20-09-2017

**ಸುತ್ತೋಲೆ**

ವಿಷಯ: ಗ್ರಾಮ ಸಮೃದ್ಧಿ ಹಾಗೂ ಸ್ವಚ್ಛತಾ ಪಕ್ಷ ಆಚರಣೆಯನ್ನು ದಿನಾಂಕ:01-10-2017 ರಿಂದ 15-10-2017 ರ ಅವಧಿಯಲ್ಲಿ ಕೈಗೊಳ್ಳುವ ಕುರಿತು.

ಉಲ್ಲೇಖ: ಕರ್ನಾಟಕ ಸರ್ಕಾರ ಸಚಿವಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಪತ್ರ ಸಂಖ್ಯೆ :ಅ.ಸ.ಪತ್ರ ಸಂಖ್ಯೆ:ಗ್ರಾಅಪ:88:ಉ.ಖಾ.ಯೋ:2017 ದಿನಾಂಕ: 18-08-2017

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ರಾಜ್ಯಗಳ ಸಹಯೋಗದೊಂದಿಗೆ ಗ್ರಾಮ ಸಮೃದ್ಧಿ ಹಾಗೂ ಸ್ವಚ್ಛತಾ ಪಕ್ಷವನ್ನು ದಿನಾಂಕ:01-10-2017 ರಿಂದ 15-10-2017 ರ ಅವಧಿಯಲ್ಲಿ ಆಚರಿಸಲು ಉದ್ದೇಶಿಸಿದೆ. ಈ ಪಕ್ಷದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಎನ್.ಎಸ್.ಎಸ್ ಘಟಕಗಳು ಗ್ರಾಮ ಪರಿಸರದ ಸ್ವಚ್ಛತೆ, ಗ್ರಾಮ ಸಭೆಗಳಲ್ಲಿ ಸಾರ್ವಜನಿಕರ ಭಾಗವಹಿಸುವಿಕೆ, ಕುಟುಂಬಗಳ ಜೀವನೋಪಾಯಕ್ಕಾಗಿ ಯೋಜನೆಗಳನ್ನು ರೂಪಿಸುವ ಕುರಿತು ಅರಿವು ಮೂಡಿಸುವ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳೂವುದು, ಸ್ವಚ್ಛತಾ ಅಂದೋಲನ, ಪ್ರಧಾನ ಮಂತ್ರಿ ಅವಾಸ್ ಯೋಜನ ಗ್ರಾಮೀಣ (ಪಿ.ಎಂ.ಎ.ವೈ.ಜಿ) ಕಾರ್ಯಕ್ರಮಗಳು, ಆರೋಗ್ಯ, ಸೌಲಭ್ಯಗಳಂತಹ ಕಾರ್ಯಚಟುವಟಿಕೆಗಳನ್ನು ಮಹಿಳಾ ಸೇವಾ ಸಂಘ, ಗ್ರಾಮ ಪಂಚಾಯತ್, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಸೇವಕರ ನೇರವಿನೊಂದಿಗೆ ಸ್ವಚ್ಛತಾ ಪಕ್ಷವನ್ನು ಯಶಸ್ವಿಯಾಗಿ ಆಚರಿಸಿ ಸಂಕ್ಷಿಪ್ತ ವರದಿಯನ್ನು ನಿರ್ದೇಶನಾಲಯದ ಎನ್‌ಎಸ್‌ಎಸ್ ಕೋಶಕ್ಕೆ ಹಾಗೂ ಪ್ರತಿಯನ್ನು nssdte@gmail.com ಗೆ ಕಳುಹಿಸಲು ಸೂಚಿಸಲಾಗಿದೆ.

ನಿರ್ದೇಶಕರು,

**ಪ್ರತಿ:**

1) ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ರಾಷ್ಟ್ರೀಯ ಸೇವಾ ಯೋಜನೆಯ ಅನುದಾನಿತ ಹಾಗೂ ಸ್ವ-ಆರ್ಥಿಕ ಘಟಕಗಳ ಪ್ರಾಚಾರ್ಯರ –ಸೂಕ್ತ ಕ್ರಮಕ್ಕಾಗಿ
2) ಕರ್ನಾಟಕ ಸರ್ಕಾರ ಸಚಿವಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬೆಂಗಳೂರು
4) ಇ-ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು
5) ಕಛೇರಿ ಕಡತ